**2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ:739/2024**

| ಪಿರ್ಯಾದುದಾರರು | ವಿರುದ್ಧ | ಆರೋಪಿ: |
|---|---|---|
| ಶ್ರೀ ಆಂಜನೇಯ ಟ್ರೇಡರ್ ಕೆಂಪನಹಳ್ಳಿ ಮಾಲೀಕರು ಕೆ ಎಲ್ ಸತೀಶ್ ಬಿನ್ ಕೆ ಬಿ ಲೋಕೇಶ್ವರಪ್ಪ. ವಯಸ್ಸುಃ 53 ವರ್ಷ, ವಾಸಃ ಕೆಂಪನಹಳ್ಳಿ ಗ್ರಾಮದ ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ | | ಮೇ. ಭಾಗ್ಯ ರಂಗ ಚಿಟ್ಸ್ ಪ್ರೈ ಲಿ. ದಾವಣಗೆರೆ, ಮಾಲೀಕರು ಎಂ ರಂಗರಾವ್ ವಯಸ್ಸು 68 ವರ್ಷ , ನಂ 154/1, ಬೆಳ್ಳುಳ್ಳಿ ಬಿಲ್ಡಿಂಗ್, ಶ್ರೀ ಲಾಡ್ಜ್ ಎದುರುಗಡೆ, ಹಳೇ ಪಿ ಬಿ ರಸ್ತೆ, ದಾವಣಗೆರೆ , |

**-:: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ  ಹೇಳಿಕೆ  ::-**

ಪ್ರಶ್ನೆ-1) ಈ ಪ್ರಕರಣದಲ್ಲಿ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿದ್ದೀರಾ? ತಿಳಿಯಿತೇ?

ಉತ್ತರಃ

ಪ್ರಶ್ನೆ-2) ಪ್ರಾಸಾ-1 ರವರಾದ ಪಿರ್ಯಾದಿ ಸಂಸ್ಥೆಯವರು ಆರೋಪಿ ಸಂಸ್ಥೆಯಾದ ನೀವು ನಮ್ಮೊಂದಿಗೆ ಚಿಟ್ ಪಂಡ್ ವ್ಯವಹಾರ ಮಾಡಿಕೊಂಡು ಬಂದಿದ್ದು ನಿಮ್ಮ ಸಂಸ್ಥೆಯಲ್ಲಿ 10 ಲಕ್ಷ ರೂ.ಗಳ ಚೀಟಿಯನ್ನು 50 ಜನರ ಸಹಯೋಗದೊಂದಿಗೆ ಆರಂಭಿಸಿದ್ಧು ಸದರಿ ಚೀಟಿ ಅವಧಿಯು 50 ತಿಂಗಳದಾಗಿದ್ದು. ಪ್ರತಿ ತಿಂಗಳು 20 ಸಾವಿರ ಗಳಂತೆ ಕಂತುಗಳನ್ನು ನಾನು ವ್ಯಾಪಾರಿ ಸಂಸ್ಥೆಯಿಂದ ಚೆಕ್ ಗಳ ಮೂಲಕ ಆರೋಪಿ ಸಂಸ್ಥೆಗೆ ಪಾವತಿಸುತ್ತಾ ಬಂದಿರುತ್ತೇನೆ. ಸದರಿ ಚೀಟಿ ಮೇ 2019ರಿಂದ ಪ್ರಾರಂಭವಾಗಿದ್ದು ಅದರಂತೆ ಜುಲೈ 2023ರ ಚೀಟಿ ಹಣವನ್ನು ಬಿಡ್ ಮಾಡಿದಾಗ ನಾನು ಚೀಟಿ ಹಣ 10 ಲಕ್ಷ ರೂ.ಗಳಲ್ಲಿ ರೂ. 75 ಸಾವಿರ ಗಳನ್ನು ಬಿಟ್ಟು ರೂ. 9,25,000/- ಗಳಿಗೆ ಬಿಡ್ ಮಾಡಿರುತ್ತಾರೆ. ಸದರಿ ಹಣವನ್ನು ಅರೋಪಿ ಸಂಸ್ಥೆ ನನಗೆ ಕೊಡಬೇಕಾಗಿತ್ತು. ಸದರಿ ಚೀಟಿ ವ್ಯವಹಾರದಲ್ಲಿ ಹಿಂದಿನಿಂದ ನಡೆದುಕೊಂಡು ಬಂದ

ಪ್ರತೀತಿಯಂತೆ ಚೀಟಿ ಬಿಡ್ ಪಡೆದವರಿಗೆ ಒಂದು ತಿಂಗಳ ಒಳಗಾಗಿ ಆರೋಪಿ ಸಂಸ್ಥೆ ಚೆಕ್ ಮೂಲಕ ಹಣವನ್ನು ವಿತರಿಸುವ ವಾಡಿಕೆ ಇದ್ದು. ನಾನು ಜುಲೈ 20213ರಲ್ಲಿ ಬಿಡ್ ಮಾಡಿದಾಗ ಸದರಿ ಹಣವನ್ನು ಒಂದು ತಿಂಗಳ ಒಳಗಾಗಿ ನೀಡಬೇಕಾಗಿದ್ದು ಆದರೆ ಆರೋಪಿ ಸಂಸ್ಥೆ ನನಗೆ ಮುಂದಿನ 2 ತಿಂಗಳ ಕಂತುಗಳನ್ನು ಮತ್ತು ಅವರ ಕಮೀಷನ್ ಮುರಿದುದುಕೊಂಡು ರೂ.8,76,500/- ಗಳಿಗೆ ಕೆನರಾ ಬ್ಯಾಂಕ್ ಪಿ ಬಿ ರಸ್ತೆ ದಾವಣಗೆರೆ ಬ್ರಾಂಚ್ ನಲ್ಲಿ ಖಾತೆ ನಂ 398592 ಹೊಂದಿದ್ದ ಚೆಕ್ ನ್ನು ಪಿರ್ಯಾದಿ ಸಂಸ್ಥೆಗೆ ಮುಂದಿನ ದಿಃ 21-10-2023 ಎಂದು ನಮೂದಿಸಿ ನೀಡಿರುತ್ತೀರಿ. ಸದರಿ ಚೆಕ್ ಗೆ ಆರೋಪಿ ಸಂಸ್ದೆಯ ಮಾಲೀಕರಾದ ಎಂ ರಂಗಾರಾವ್ ರವರು ಸಹಿ ಮಾಡಿರುತ್ತಾರೆ.

ಉತ್ತರಃ

ಪ್ರಶ್ನೆಃ2 ಪ್ರಾಸಾ1 ರವರು ಮುಂದುವರೆದು ನಾನು ಸದರಿ ಚೆಕ್ ನ್ನು ದಿಃ 31-10-2023ರಂದು ಕೆಂಪನಹಳ್ಳಿಯ ಬ್ಯಾಂಕ್ ಆಫ್ ಇಂಡಿಯ ಶಾಖೆಯಲ್ಲಿ ಹೊಂದಿದ್ದ ಬ್ಯಾಂಕ್ ಖಾತೆಯ ಮೂಲಕ ದಿನಾಂಕಃ 01-11-2023 ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದ್ದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ (Exeeds arrangement) ಎಂದು ಸದರಿ ಚೆಕ್ ಹಿಂದಿರುಗಿಸಲ್ಪಟ್ಟಿರುತ್ತದೆ. ಸದರಿ ಚೆಕ್ ಆಮಾನ್ಯಗೊಂಡ ನಂತರ ನಾನು ಅರೋಪಿ ಸಂಸ್ಥೆಯ ಮಾಲೀಕರಿಗೆ ಚೆಕ್ ಅಮಾನ್ಯಗೊಂಡ ವಿಷಯವನ್ನು ದೂರವಾಣಿ ಮೂಲಕ ತಿಳಿಸಿದಾಗ ಅವರು ಸದರಿ ಚೆಕ್ ನ್ನು ಇನ್ನೊಮ್ಮೆ 2024ರ ಜನವರಿ ಮೊದಲನೇ ವಾರದಲ್ಲಿ ನಗದೀಕಾರಣಕ್ಕಾಗಿ ಸಲ್ಲಿಸಲು ತಿಳಿಸಿದ್ದು. ಅದರಂತೆ ನಾನು ಪುನಃ ಚೆಕ್ ನ್ನು ದಿಃ 05-01-2024ರಂದು ಸಲ್ಲಿಸಿದ್ದು ಸದರಿ ಚೆಕ್ ದಿಃ 10-01-2024 ರಂದು ಈ ಹಿಂದೆ ನೀಡಿದ್ದ ಹಿಂಬರಹದಂತೆ (Exeeds arrangement) ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ.

ಸದರಿ ಚೆಕ್ ನ್ನು ನಗದೀಕರಿಸಲು ಸಲ್ಲಿಸಿದ ನಂತರ ಸದರಿ ಚೆಕ್ ನನಗೆ ವಾಪಸ್ ಆಗುವ ಮುಂಚೆ ದಿಃ 08-01-2024ರಂದು ಆರೋಪಿಯು RTGS ಮೂಲಕ 2 ಲಕ್ಷ ರೂ.ಗಳನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಉಳಿದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ.

ಆದ್ದರಿಂದ ನಾನು ತಮ್ಮ ವಕೀಲರ ಮುಖಾಂತರ ದಿಃ 12-01-2024 ರಂದು ಲೀಗಲ್ ನೋಟಿಸು ನೀಡಿದ್ದು, ಸದರಿ ನೋಟಿಸು ದಿಃ 16-01-2024 ರಂದು ತಮಗೆ ಜಾರಿಯಾಗಿದ್ದು, ಆರೋಪಿಯಾದ ನೀವು ದಿಃ 01-02-2024ರಂದು ನನಗೆ ಮರುತ್ತರ ನೀಡಿ ಆರೋಪಿಯು ಪಾವತಿಸಬೇಕಾಗಿದ್ದ ರೂ.6,76,500/- ಗಳ ಹೊಣೆಗಾರಿಕೆಯನ್ನು ಒಪ್ಪಿಕೊಂಡು ಒಂದು ತಿಂಗಳ ಒಳಗಾಗಿ ಪೂರ್ತಿ ಹಣವನ್ನು ಪಾವತಿಸುವುದಾಗಿ ಹೇಳಿರುತ್ತೀರಿ. ಆದರೆ ತಾವು ಒಪ್ಪಿಕೊಂಡತೆ ಕಾನೂನು ರೀತಿ ಕೊಡಬೇಕಾದ ಹಣವನ್ನು ಮಾರುಪಾವತಿ ಮಾಡಿರುವುದಿಲ್ಲ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ-3)ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ? ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರಃ

ಪ್ರಶ್ನೆ-4) ನೀವು ಹೆಚ್ಚಿ ಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರಃ

( ಆರೋಪಿ ಹೇಳಿಕೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ

ದಿನಾಂಕಃ 05-10-2024

**2ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ**
**ನ್ಯಾಯಾಧೀಶರು. ಚನ್ನಗಿರಿ**

**<u>ಆರೋಪಿಯ ಸಹಿ:</u>**

**2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ:739/2024**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀ ಆಂಜನೇಯ ಟ್ರೇಡರ್ ಕೆಂಪನಹಳ್ಳಿ ಮಾಲೀಕರು ಕೆ ಎಲ್ ಸತೀಶ್ ಬಿನ್ ಕೆ ಬಿ ಲೋಕೇಶ್ವರಪ್ಪ. ವಯಸ್ಸುಃ 53 ವರ್ಷ, ವಾಸಃ ಕೆಂಪನಹಳ್ಳಿ ಗ್ರಾಮದ ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ | | ಮೇ. ಭಾಗ್ಯ ರಂಗ ಚಿಟ್ಸ್ ಪ್ರೈ ಲಿ. ದಾವಣಗೆರೆ, ಮಾಲೀಕರು ಎಂ ರಂಗರಾವ್ ವಯಸ್ಸು 68 ವರ್ಷ , ನಂ 154/1, ಬೆಳ್ಳುಳ್ಳಿ ಬಿಲ್ಡಿಂಗ್, ಶ್ರೀ ಲಾಡ್ಜ್ ಎದುರುಗಡೆ, ಹಳೇ ಪಿ ಬಿ ರಸ್ತೆ, ದಾವಣಗೆರೆ , |

ನಾನು **ಶ್ರೀಮತಿ ಮಹಾಲಕ್ಷ್ಮೀ ಜಿ 2**ನೇ ಹೆಚ್ಚುವರಿ  ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿಯಾದ ನೀವು:-

**ಃ ಆಪಾದನೆ ಃ**

ಆರೋಪಿ ಸಂಸ್ಥೆಯಾದ ನೀವು ಪಿರ್ಯಾದುದಾರರಿಂದ ಚಿಟ್ ಪಂಡ್ ವ್ಯವಹಾರ ಮಾಡಿಕೊಂಡು ಬಂದಿದ್ದು ನಿಮ್ಮ ಸಂಸ್ಥೆಯಲ್ಲಿ 10 ಲಕ್ಷ ರೂ.ಗಳ ಚೀಟಿಯನ್ನು 50 ಜನರ ಸಹಯೋಗದೊಂದಿಗೆ ಆರಂಭಿಸಿದ್ಧು ಸದರಿ ಚೀಟಿ ಅವಧಿಯು 50 ತಿಂಗಳದಾಗಿದ್ದು. ಪ್ರತಿ ತಿಂಗಳು 20 ಸಾವಿರ ಗಳಂತೆ ಕಂತುಗಳನ್ನು ಪಿರ್ಯಾದಿ ಸಂಸ್ಥೆಯವರು ಅವರ ವ್ಯಾಪಾರಿ ಸಂಸ್ಥೆಯಿಂದ ಚೆಕ್ ಗಳ ಮೂಲಕ ಆರೋಪಿ ಸಂಸ್ಥೆಗೆ ಪಾವತಿಸುತ್ತಾ ಬಂದಿರುತ್ತಾರೆ. ಸದರಿ ಚೀಟಿ ಮೇ 2019ರಿಂದ ಪ್ರಾರಂಭವಾಗಿದ್ದು ಅಂರಂತೆ ಜುಲೈ 2023ರ ಚೀಟಿ ಹಣವನ್ನು ಬಿಡ್ ಮಾಡಿದಾಗ ಪಿರ್ಯಾದಿ ಸಂಸ್ಥೆಯವರು ಚೀಟಿ ಹಣ 10 ಲಕ್ಷ ರೂ.ಗಳಲ್ಲಿ ರೂ. 75 ಸಾವಿರ ಗಳನ್ನು ಬಿಟ್ಟು ರೂ. 9,25,000/- ಗಳಿಗೆ ಬಿಡ್ ಮಾಡಿರುತ್ತಾರೆ. ಸದರಿ ಹಣವನ್ನು ಅರೋಪಿ ಸಂಸ್ಥೆ ಪಿರ್ಯಾದಿ ಸಂಸ್ಥೆಯವರಿಗೆ ಕೊಡಬೇಕಾಗಿತ್ತು. ಸದರಿ ಚೀಟಿ ವ್ಯವಹಾರದಲ್ಲಿ ಹಿಂದಿನಿಂದ ನಡೆದುಕೊಂಡು ಬಂದ ಪ್ರತೀತಿಯಂತೆ ಚೀಟಿ ಬಿಡ್ ಪಡೆದವರಿಗೆ ಒಂದು ತಿಂಗಳ ಒಳಗಾಗಿ

ಆರೋಪಿ ಸಂಸ್ಥೆ ಚೆಕ್ ಮೂಲಕ ಹಣವನ್ನು ವಿತರಿಸುವ ವಾಡಿಕೆ ಇದ್ದು. ಪಿರ್ಯಾದಿ ಸಂಸ್ಥೆಯವರು  ಜುಲ್ಲೆ 20213ರಲ್ಲಿ ಬಿಡ್ ಮಾಡಿದಾಗ ಸದರಿ ಹಣವನ್ನು ಪಿರ್ಯಾದಿ ಸಂಸ್ಥೆಯಗೆ  ಒಂದು ತಿಂಗಳ ಒಳಗಾಗಿ ನೀಡಬೇಕಾಗಿದ್ದು ಆದರೆ ಆರೋಪಿ ಸಂಸ್ಥೆ ಪಿರ್ಯಾದಿ ಸಂಸ್ಥೆಗೆ ಮುಂದಿನ 2 ತಿಂಗಳ ಕಂತುಗಳನ್ನು ಮತ್ತು ಅವರ ಕಮೀಷನ್ ಮುರಿದುದುಕೊಂಡು ರೂ.8,76,500/- ಗಳಿಗೆ ಕೆನರಾ ಬ್ಯಾಂಕ್ ಪಿ ಬಿ ರಸ್ತೆ ದಾವಣಗೆರೆ ಬ್ರಾಂಚ್ ನಲ್ಲಿ ಖಾತೆ ನಂ 398592 ಹೊಂದಿದ್ದ  ಚೆಕ್ ನ್ನು ಪಿರ್ಯಾದಿ ಸಂಸ್ಥೆಗೆ  ಮುಂದಿನ ದಿಃ 21-10-2023 ಎಂದು ನಮೂದಿಸಿ ನೀಡಿರುತ್ತೀರಿ. ಸದರಿ ಚೆಕ್ ಗೆ ಆರೋಪಿ ಸಂಸ್ದೆಯ ಮಾಲೀಕರಾದ ಎಂ ರಂಗಾರಾವ್ ರವರು ಸಹಿ ಮಾಡಿರುತ್ತಾರೆ.

ಅದನ್ನು ಪಿರ್ಯಾದುದಾರ ಸಂಸ್ಥೆಯು ಸದರಿ ಚೆಕ್ ನ್ನು ದಿಃ 31-10-2023ರಂದು ಕೆಂಪನಹಳ್ಳಿಯ ಬ್ಯಾಂಕ್ ಆಫ್ ಇಂಡಿಯ  ಶಾಖೆಯಲ್ಲಿ ಹೊಂದಿದ್ದ ಬ್ಯಾಂಕ್ ಖಾತೆಯ ಮೂಲಕ ದಿನಾಂಕಃ 01-11-2023 ರಂದು  ನಗದೀಕರಣಕ್ಕಾಗಿ ಹಾಜರುಪಡಿಸಿದ್ದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ (Exeeds arrangement) ಎಂದು ಸದರಿ ಚೆಕ್ ಹಿಂದಿರುಗಿಸಲ್ಪಟ್ಟಿರುತ್ತದೆ.  ಸದರಿ ಚೆಕ್ ಆಮಾನ್ಯಗೊಂಡ ನಂತರ  ಪಿರ್ಯಾದಿ ಸಂಸ್ಥೆ ಅರೋಪಿ ಸಂಸ್ಥೆಯ ಮಾಲೀಕರಿಗೆ ಚೆಕ್ ಅಮಾನ್ಯಗೊಂಡ ವಿಷಯವನ್ನು ದೂರವಾಣಿ ಮೂಲಕ ತಿಳಿಸಿದಾಗ ಅವರು ಸದರಿ ಚೆಕ್ ನ್ನು ಇನ್ನೊಮ್ಮೆ 2024ರ ಜನವರಿ ಮೊದಲನೇ ವಾರದಲ್ಲಿ ನಗದೀಕಾರಣಕ್ಕಾಗಿ ಸಲ್ಲಿಸಲು ತಿಳಿಸಿದ್ದು. ಅದರಂತೆ ಪಿರ್ಯಾದಿ ಸಂಸ್ಥೆಯವರು ಪುನಃ ಚೆಕ್ ನ್ನು ದಿಃ 05-01-2024ರಂದು ಸಲ್ಲಿಸಿದ್ದು ಸದರಿ ಚೆಕ್ ದಿಃ 10-01-2024ರಂದು ಈ ಹಿಂದೆ ನೀಡಿದ್ದ ಹಿಂಬರಹದಂತೆ  (Exeeds arrangement) ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ.

ಸದರಿ ಚೆಕ್ ನ್ನು ನಗದೀಕರಿಸಲು ಸಲ್ಲಿಸಿದ ನಂತರ ಸದರಿ ಚೆಕ್ ಪಿರ್ಯಾದಿ ಸಂಸ್ಥೆಗೆ ವಾಪಸ್ ಆಗುವ ಮುಂಚೆ ದಿಃ 08-01-2024ರಂದು ಆರೋಪಿಯು RTGS ಮೂಲಕ 2 ಲಕ್ಷ ರೂ.ಗಳನ್ನು ಪಿರ್ಯಾದಿ ಸಂಸ್ಥೆ  ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಉಳಿದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ.

ಆದ್ದರಿಂದ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 12-01-2024 ರಂದು ಲೀಗಲ್ ನೋಟಿಸು ನೀಡಿದ್ದು, ಸದರಿ ನೋಟಿಸು ದಿಃ 16-01-2024 ರಂದು ತಮಗೆ ಜಾರಿಯಾಗಿದ್ದು, ಆರೋಪಿಯಾದ ನೀವು ದಿಃ 01-02-2024ರಂದು ಪಿರ್ಯಾದಿ ಸಂಸ್ಥೆಗೆ ಮರುತ್ತರ ನೀಡಿ ಆರೋಪಿಯು ಪಾವತಿಸಬೇಕಾಗಿದ್ದ ರೂ.6,76,500/- ಗಳ ಹೊಣೆಗಾರಿಕೆಯನ್ನು ಒಪ್ಪಿಕೊಂಡು ಒಂದು ತಿಂಗಳ ಒಳಗಾಗಿ ಪೂರ್ತಿ ಹಣವನ್ನು ಪಾವತಿಸುವುದಾಗಿ ಹೇಳಿರುತ್ತೀರಿ. ಆದರೆ ತಾವು ಒಪ್ಪಿಕೊಂಡತೆ ಕಾನೂನು ರೀತಿ ಕೊಡಬೇಕಾದ ಹಣವನ್ನು ಮಾರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ಕಲಂ 138 ನೆಗೋಷಿಯಬಲ್ ಕಾಯ್ದೆ ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾಧಿಸಿದೆ.

ಸ್ಥಳಃ ಚನ್ನಗಿರಿ
ದಿನಾಂಕಃ 05-10-2024

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ**

**<u>2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,</u>**

**<u>ನ್ಯಾಯಾಲಯದಲ್ಲಿ</u>**

**<u>ಸಿಸಿ ನಂ:739/2024</u>**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀ ಆಂಜನೇಯ ಟ್ರೇಡರ್ ಕೆಂಪನಹಳ್ಳಿ ಮಾಲೀಕರು ಕೆ ಎಲ್ ಸತೀಶ್ ಬಿನ್ ಕೆ ಬಿ ಲೋಕೇಶ್ವರಪ್ಪ. ವಯಸ್ಸುಃ 53 ವರ್ಷ, ವಾಸಃ ಕೆಂಪನಹಳ್ಳಿ ಗ್ರಾಮದ ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ | | ಮೇ. ಭಾಗ್ಯ ರಂಗ ಚಿಟ್ಸ್ ಪ್ರೈ ಲಿ. ದಾವಣಗೆರೆ, ಮಾಲೀಕರು ಎಂ ರಂಗರಾವ್ ವಯಸ್ಸು 68 ವರ್ಷ , ನಂ 154/1, ಬೆಳ್ಳುಳ್ಳಿ ಬಿಲ್ಡಿಂಗ್, ಶ್ರೀ ಲಾಡ್ಜ್ ಎದುರುಗಡೆ, ಹಳೇ ಪಿ ಬಿ ರಸ್ತೆ, ದಾವಣಗೆರೆ , |

## <u>ಆರೋಪಿತನ ಹೇಳಿಕೆ</u>

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 05-10-2024 ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ**
**ದಿನಾಂಕಃ 05-10-2024**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.**